ಬರುತ್ತಾರೆ ಎಂದಿದ್ದರು. ಆದರೆ ಮಾನ್ಯ ಸಚಿವರು 3 ಗಂಟೆಗೆ ಬಂದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರಬೇಕಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ನಾನು ಉತ್ತರ ಕೊಡುತ್ತೇನೆ. ವಿಷಯ ಪ್ರಸ್ತಾಪ ಮಾಡಿ.

ಅಧ್ಯಕ್ಷರು : ಮಾನ್ಯ ಮಹಾದೇವಪ್ರಸಾದ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಿ.

6. ಗಮನ ಸೆಳೆಯುವ ಸೂಚನೆ :

ಅ) ವಿಷಯ : ಚಾಮರಾಜನಗರ ಹಾಗೂ ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ವಿನಾಕಾರಣ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ :

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ವಿನಾಕಾರಣ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ದಿನಾಂಕ : 07-12-2009 ರಂದು ಚಾಮರಾಜನಗರ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕ ಹಸಿರು ಸೇನೆಯ ಮತ್ತು ಪ್ರಗತಿಪರ ಸಂಘಟನೆ ವತಿಯಿಂದ ವಿವಿಧ 26 ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಮಹೇಶ್‌ಪ್ರಭು, ಶ್ರೀ ಹೊನ್ನೂರು ಪ್ರಕಾಶ್ ಮತ್ತು ಹಸಿರು ಸೇನೆಯ ಶ್ರೀ ಮಹೇಶ್‌ಕುಮಾರ್ ರವರ ನೇತೃತ್ವದಲ್ಲಿ ಅನಿರ್ಧಿಷ್ಟ ಕಾಲ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದ್ದರಿಂದ ಸುಮಾರು 900 ಜನ ರೈತ ಸಂಘ ಹಾಗೂ ಹಸಿರು ಸೇನೆ ಹಾಗೂ ಪ್ರಗತಿಪತ ಸಂಘದವರು ಚಾಮರಾಜನಗರ ಪಟ್ಟಣದ ಮುಖ್ಯ ರಸ್ತೆಯ ಮೂಲಕ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಯವರ ಕಛೇರಿಗೆ ಬಂದು ಜಿಲ್ಲಾಧಿಕಾರಿಯವರಿಗೆ ಹಕ್ಕೊತ್ತಾಯವುಳ್ಳ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ

ಮಟ್ಟದಲ್ಲಿ ತೆಗೆದುಕೊಳ್ಳಬೇಕಾದಂತಹ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರೂ ಸಹ ಚಳುವಳಿಗಾರರು ಸರ್ಕಾರಿ ಖಾಲಿ ಜಾಗದಲ್ಲಿ ಅನಿರ್ಧಿಷ್ಟ ಚಳುವಳಿಯನ್ನು ಮುಂದುವರೆಸಿರುತ್ತಾರೆ. ರೈತ ಸಂಘದ ಮುಖಂಡರು ಮಾತನಾಡಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ರಾಜ್ಯ ಮಟ್ಟದ ಇಲಾಖಾ ಮುಖ್ಯಸ್ಥರು ಬಂದು ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಅನಿರ್ಧಿಷ್ಟ ಕಾಲ ಧರಣಿಯನ್ನು ಮುಂದುವರಿಸುವುದಾಗಿ ಜಿಲ್ಲಾ ಆಡಳಿತ ಸಂಕೀರ್ಣ ಆವರಣದಲ್ಲಿ ಒಂದು ಶಾಮಿಯಾನ ಹಾಕಿ ಧರಣಿ ಮುಂದುವರಿಸಿರುತ್ತಾರೆ. ಸೂಕ್ತ ಬಂದೋಬಸ್ತ್ ಮಾಡಲಾಗಿತ್ತು.

ದಿನಾಂಕ: 08–12–2009 ರಂದು ಚಳುವಳಿಯನ್ನು ಮುಂದುವರಿಸಿ ಚಾಮರಾಜನಗರ ಜಿಲ್ಲೆಯ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ತಮ್ಮ ಮುಂದೆ ಕರೆಯಿಸಿ ಅವರು ತಮ್ಮ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಿಳಿಸಿದ್ದರ ಮೇರೆಗೆ, ವಿವಿದ ಇಲಾಖೆಯ ಅಧಿಕಾರಿಗಳು ಚಳುವಳಿ ನಡೆಸುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಿರುತ್ತಾರೆ. ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ನಂತರ ದಿನಾಂಕ: 09–12–2009 ರಂದು ಸದರಿ ಚಳುವಳಿಯನ್ನು ಚಳುವಳಿಗಾರರು ತೀವ್ರತರವಾಗಿ ಮಾಡಿ ಸರ್ಕಾರದ ಗಮನವನ್ನು ಸೆಳೆಯುತ್ತೇವೆಂದು ಸುಮಾರು 7 ಎತ್ತಿನ ಗಾಡಿಗಳ ಮೂಲಕ ಪ್ರವಾಸಿ ಮಂದಿರದಿಂದ ಬಂದು ಜಿಲ್ಲಾಧಿಕಾರಿ ಕಛೇರಿಯ ಆವರಣದೊಳಗಡೆ ನುಗ್ಗಲು ಯತ್ನಿಸಿದಾಗ ಸ್ಥಳದಲ್ಲಿದ್ದ ಪೊಲೀಸರು ತಡೆವೊಡ್ಡಿರುತ್ತಾರೆ. ಆಗ ಅವರು ರಾಜ್ಯ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು, ಜಿಲ್ಲಾಧಿಕಾರಿ ಮತ್ತು ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿ ಮುಖ್ಯ ಜೋಡಿ ರಸ್ತೆಯಲ್ಲಿ ಎತ್ತಿನ ಗಾಡಿಗಳನ್ನು ಅಡ್ಡನಿಲ್ಲಿಸಿ ಸುಮಾರು 1.00 ಗಂಟೆ ಕಾಲ ಸಂಚಾರಕ್ಕೆ ತಡೆವುಂಟು ಮಾಡಿ ಜೋಡಿ ರಸ್ತೆಯಲ್ಲಿಯೇ ಊಟ ಮಾಡಿ, ನಂತರ ರಸ್ತೆ ತೆರವುಗೊಳಿಸಿರುತ್ತಾರೆ. ನಂತರ ಸದರಿ ರೈತ ಸಂಘದವರು ಧರಣಿ ಸ್ಥಳದಲ್ಲಿ ಬಂದು ಧರಣಿ ಮುಂದುವರಿಸಿರುತ್ತಾರೆ. ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ದಿನಾಂಕ: 10–12–2009 ರಂದು ಹಿಂದಿನ ದಿನ ಅಂದರೆ ದಿನಾಂಕ: 09–12–2009 ರಂದು ಜಿಲ್ಲಾಧಿಕಾರಿಗಳ ಕಛೇರಿ ಆವಣರದೊಳಗಡೆಗೆ ಎತ್ತಿನ ಗಾಡಿಗಳನ್ನು ಬಿಡಲಿಲ್ಲವೆಂದು, ರೈತ ವಿರೋಧಿಗಳೆಂದು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸರ ವಿರುದ್ಧ ಘೋಷಣೆ ಕೂಗುತ್ತಾ ಸುಮಾರು 40

ಹೆಂಗಸರು ತಮ್ಮ ಕೈಯಲ್ಲಿ ಪೊರಕೆಗಳನ್ನು ಹಿಡಿದುಕೊಂಡು 100 ಜನ ಗಂಡಸರೊಂದಿಗೆ ಸೇರಿ ಜಿಲ್ಲಾಧಿಕಾರಿಗಳ ಕಛೇರಿಯ ಸುತ್ತಲು ಪ್ರಚೋದನಕಾರಿ ಘೋಷಣೆಗಳನ್ನು ಕೂಗುತ್ತಾ, ಅವಹೇಳನ ಮಾಡುತ್ತಾ ಮೆರವಣಿಗೆ ನಡೆಸಿರುತ್ತಾರೆ.

ದಿನಾಂಕ: 11–12–2009 ರಂದು ಚಾಮರಾಜನಗರ ಪ್ರವಾಸಿ ಮುಂದಿರದಿಂದ ರೈತ ಸಂಘದ ಕಾರ್ಯಕರ್ತರು ಟ್ರಾಕ್ಟರ್‌ಗಳಲ್ಲಿ ಮೆರವಣಿಗೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸದರಿ ಮೆರವಣಿಗೆಯಲ್ಲಿ 150ಕ್ಕೂ ಹೆಚ್ಚು ಗಂಡಸರು, 70 ರಷ್ಟು ಜನ ಹೆಂಗಸರು, 31 ಟ್ರಾಕ್ಟರ್‌ಗಳಲ್ಲಿ ಮಧ್ಯಾಹ್ನ 1.15 ಗಂಟೆಗೆ ಪ್ರವಾಸಿ ಮುಂದಿರದಿಂದ ಹಾಗೂ ಮುಖ್ಯ ರಸ್ತೆಗಳಿಂದ ಮೆರವಣಿಗೆ ಹೊರಟು, ಜಿಲ್ಲಾ ಆಡಳಿತ ಭವನ ಕಟ್ಟಡದ ಒಳಕ್ಕೆ ಟ್ರಾಕ್ಟರ್‌ಗಳನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸಿದಾಗ ಸ್ಥಳದಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಪೊಲೀಸರು ಅದನ್ನು ತಡೆದಿದ್ದು, ಇದರಿಂದ ಕುಪಿತರಾದ ಚಳುವಳಿಗಾರರು ತಮ್ಮ ಟ್ರಾಕ್ಟರ್‌ಗಳನ್ನು ವೃತ್ತಾಕಾರವಾಗಿ ಜೋಡಿ ಮುಖ್ಯ ರಸ್ತೆಯ ಎಲ್ಲಾ ಭಾಗಗಳಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿರುತ್ತಾರೆ. ಪೊಲೀಸರು ರಸ್ತೆ ತೆರವು ಮಾಡಲು ತಿಳಿಸಿದರೂ ಸಹಾ ಅವರು ವಾಹನಗಳನ್ನು ತೆರವುಗೊಳಿಸದೆ ರಸ್ತೆಯಲ್ಲಿಯೇ ಟ್ರಾಕ್ಟರ್‌ಗಳನ್ನು ಬಿಟ್ಟು ಊಟಕ್ಕೆ ಹೋಗಿರುತ್ತಾರೆ. ಊಟ ಮಾಡಿಕೊಂಡು ಬಂದು ಮತ್ತೆ ಧರಣಿಯನ್ನು ಮುಂದುವರಿಸುವುದಾಗಿ ಹೇಳಿರುತ್ತಾರೆ. ಸುಮಾರು 1 ಗಂಟೆಕಾಲ ರಸ್ತೆ ತಡೆ ಮಾಡಿದ್ದರಿಂದ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಆಗ ಪೊಲೀಸರೇ ಸದರಿ ಟ್ರಾಕ್ಟರ್‌ಗಳನ್ನು ತಾವೇ ಚಾಲನೆ ಮಾಡಿ ತೆರವುಗೊಳಿಸುತ್ತಿದ್ದಾಗ ಸಂಘದ ಕಾರ್ಯಕರ್ತರು ತಮ್ಮ ಚಳುವಳಿಯನ್ನು ಹತ್ತಿಕ್ಕುತ್ತಿದ್ದಾರೆಂದು ಭಾವಿಸಿ, ಪೂರ್ವ ನಿಯೋಜಿತರಾಗಿ ಬಂದು ವಾಹನಗಳನ್ನು ಏಕೆ ತೆರವುಗೊಳಿಸುತ್ತಿದ್ದೀರಿ? ನೀವು ನಮ್ಮ ವಾಹನಗಳನ್ನು ಮುಟ್ಟುವುದಕ್ಕೆ ಯಾರು? ನಿಮಗೆ ಯಾವ ಅಧಿಕಾರ ಇದೆ? ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ತೆರವುಗೊಳಿಸುತ್ತಿದ್ದ ಸಿಬ್ಬಂದಿಯವರ ಮೇಲೆ ಹಲ್ಲೆಗೆ ಪ್ರಯತ್ನಿಸಿದ್ದು, ಈ ಮಧ್ಯ ಯಾರೋ ಚಳುವಳಿಗಾರರು ಕಲ್ಲನ್ನು ಬೀಸಿದ್ದರಿಂದ ತೆರವುಗೊಳಿಸುತ್ತಿದ್ದ ಪೊಲೀಸ್ ಸಿಬ್ಬಂದಿಯವರಿಗೆ ಬಡಿದು ಗಾಯಗಳಾಗಿರುತ್ತದೆ. ಸ್ಥಳದಲ್ಲಿದ್ದ ಡಿ.ಎಸ್.ಪಿ.ರವರು ಗುಂಪನ್ನು ಚದುರಿಸಲು ಧ್ವನಿವರ್ಧಕ ಮೂಲಕ ಮನವಿ ಮಾಡಿಕೊಂಡರೂ ಸಹ ಚಳುವಳಿಗಾರರು

ಪೊಲೀಸರ ಮೇಲೆ ಕಲ್ಲು ತೂರಾಟ ಮುಂದುವರಿಸಿದ್ದರಿಂದ ಮುಂದೆ ಆಗಬಹುದಾದ ಪ್ರಾಣ ಹಾನಿ, ಆಸಿಪಾಸ್ತಿ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಲಘು ಲಾಠಿ ಪ್ರಹಾರ ನಡೆಸಿ, ವಯಸ್ಸಾದವರನ್ನು ಬಿಟ್ಟು ಒಟ್ಟು 40 ಜನ ರೈತ ಸಂಘದವರನ್ನು ವಶಕ್ಕೆ ಪಡೆದು ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 178/2009 ಕಲಂ:143, 144, 145, 147, 148, 341, 324, 353, 332, 427 ರೆ/ವಿ. 149 ಐಪಿಸಿ ರೀತ್ಯ ಪ್ರಕರಣವನ್ನು ದಾಖಲಿಸಿ 39 ಜನರನ್ನು ಬಂಧಿಸಿ ಚಾಮರಾಜನಗರ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರ ಆದೇಶದ ಮೇರೆಗೆ ಆರೋಪಿಗಳನ್ನು ಮೈಸೂರಿನ ಬಂಧಿಖಾನೆಗೆ ರವಾನಿಸಲಾಗಿದೆ. ಅವರಲ್ಲಿ ಶ್ರೀ ಮಹೇಶ್ ಕುಮಾರ್ ಎಂಬುವವರ ತಲೆಗೆ ಸಾಧಾರಣ ಗಾಯವಾಗಿದ್ದು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ಕಳುಹಿಸಲಾಗಿದೆ. 40 ಜನ ಹೆಣ್ಣು ಮಕ್ಕಳನ್ನು ಕರ್ನಾಟಕ ಪೊಲೀಸ್ ಆಕ್ಟ್ ಕಲಂ 71 ರೀತ್ಯಾ ಮಹಿಳಾ ಸಿಬ್ಬಂದಿಯವರಿಂದ ದಸ್ತಗಿರಿ ಮಾಡಿ ಬಿಡುಗಡೆ ಮಾಡಲಾಗಿದ್ದರೂ ಸಹ ಅವರು ತಮ್ಮನ್ನು ಮೈಸೂರಿನ ಜೈಲಿಗೆ ಕಳುಹಿಸಿ ಎಂದು ಒತ್ತಾಯಿಸಿ ಅಲ್ಲಿಯೇ ಕುಳಿತಿದ್ದರು. ರಸ್ತೆಯಲ್ಲಿದ್ದ ಟ್ರಾಕ್ಟರ್‌ಗಳನ್ನು ರೈತರೇ ಚಲಾಯಿಸಿಕೊಂಡು ಹೋಗಿರುತ್ತಾರೆ. ಈ ಗಲಾಟೆಯಲ್ಲಿ 17 ಜನ ಪೊಲೀಸರಿಗೆ ಗಾಯಗಳಾಗಿದ್ದು, ದಿನಾಂಕ: 12–12–2009 ರಂದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಹೋಗಿರುತ್ತಾರೆ. ರೈತ ಸಂಘದ 13 ಜನರು ಗಾಯಗೊಂಡಿದ್ದು, ಚಿಕಿತ್ಸೆ ಪಡೆದು ಹೋಗಿರುತ್ತಾರೆ. ದಿನಾಂಕ: 11–12–2009 ರಂದು ರಾತ್ರಿ ಸುಮಾರು 11–45 ಗಂಟೆಗೆ ಕರ್ನಾಟಕ ರಾಜ್ಯದ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವರಾದ ಶ್ರೀ ಹೆಚ್.ಹಾಲಪ್ಪ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ದಕ್ಷಿಣ ವಲಯ, ಮೈಸೂರುರವರು ಭೇಟಿ ನೀಡಿದ್ದು, ಮಾನ್ಯ ಸಚಿವರು ಮೇಲ್ಕಂಡ ಗಾಯಾಳು ಹಾಗೂ ಡಿ.ಎ.ಆರ್.ನಲ್ಲಿ ಕಲಂ 71 ಕೆ.ಪಿ.ಕಾಯ್ದೆಯಡಿ ದಸ್ತಗಿರಿಯಾಗಿದ್ದ 40 ಮಹಿಳೆಯನ್ನು ಉದ್ದೇಶಿಸಿ ಮಾತನಾಡಿರುತ್ತಾರೆ.

ದಿನಾಂಕ: 12–12–2009 ರಂದು ಕೆಲವು ಸ್ಥಳೀಯ ಸಂಘಟನೆಗಳು ರೈತ ಸಂಘಕ್ಕೆ ತಮ್ಮ ಬೆಂಬಲ ತೋರಿಸಲು ಚಾಮರಾಜನಗರ ಬಂದ್ ಕರೆ ನೀಡಿದ ಹಿನ್ನೆಲೆಯಲ್ಲಿ ಚಾಮರಾಜನಗರ ತಾಲ್ಲೂಕು ದಂಡಾಧಿಕಾರಿಗಳು

ಚಾಮರಾಜನಗರ ಪಟ್ಟಣದಲ್ಲಿ ಕಲಂ 144 ಸಿ.ಆರ್.ಪಿ.ಸಿ. ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿರುತ್ತಾರೆ.

ದಿನಾಂಕ: 11–12–2009 ರಂದು ಪೊಲೀಸರು ರೈತರ ಮೇಲೆ ಲಘು ಲಾಠಿ ಪ್ರಹಾರ ಮಾಡಿದ್ದಾರೆಂದು ದಿನಾಂಕ: 12–12–2009 ರಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ, ಉಪಾಧ್ಯಕ್ಷ ಶ್ರೀ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಶ್ರೀ ಕುರುಬೂರು ಶಾಂಕತಕುಮಾರ್, ಚಾಮರಾಜನಗರ ಕ್ಷೇತ್ರದ (ಕಾಂಗ್ರೆಸ್ ಪಕ್ಷ) ಶಾಸಕರಾದ ಶ್ರೀ ಪುಟ್ಟರಂಗಶೆಟ್ಟಿ ಇವರ ನೇತೃತ್ವದಲ್ಲಿ 150–200 ಜನರು ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ಸಭೆ ಸೇರಿದ್ದರು. ಅವರು ಪ್ರವಾಸಿ ಮಂದಿರದಲ್ಲಿ ಇದ್ದುದ್ದರಿಂದ ಪೊಲೀಸರು ಅವರಿಗೆ ಕಲಂ 144 ಸಿ.ಆರ್.ಪಿ.ಸಿ. ರೀತ್ಯಾ ನಿಷೇಧಾಜ್ಞೆ ಜಾರಿಯಲ್ಲಿದ್ದುದ್ದರಿಂದ ಅಲ್ಲಿಂದ ಅವರಿಗೆ ಹೊರಡಲು ತಿಳಿ ಹೇಳಿದ್ದರಿಂದ ಅವರು ಹೊರಟು ಹೋಗಿರುತ್ತಾರೆ. ಉಳಿದ ಕಡೆ 47 ಜನ ರೈತರು ನಿಷೇಧಾಜ್ಞೆ ಉಲ್ಲಂಘಿಸುವ ಪ್ರಯತ್ನದಲ್ಲಿದ್ದ ಕಾರಣ ಕಲಂ 71 ಕೆ.ಪಿ.ಆಕ್ಟ್ ರೀತ್ಯಾ ದಸ್ತಗಿರಿ ಮಾಡಿ ನಂತರ ಬಿಡುಗಡೆ ಮಾಡಲಾಗಿದೆ.

ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು, ದಿನಾಂಕ: 11–12–2009 ರಂದು ನಡೆದ ಪೊಲೀಸ್ ಲಾಠಿ ಚಾರ್ಜ್ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸಿರುತ್ತಾರೆ. ದಿನಾಂಕ: 14–12–2009 ರಂದು ನ್ಯಾಯಾಂಗ ಬಂಧನದಲ್ಲಿರುವ 40 ಜನರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

ದಿನಾಂಕ: 15.12.2009 ರಂದು ಶ್ರೀ ಮಹೇಶಪ್ರಭುರವರ ನೇತೃತ್ವದಲ್ಲಿ 100–150 ಜನರು ರೈತರು ಚಾಮರಾಜನಗರ ಪ್ರವಾಸಿ ಮಂದಿರದಲ್ಲಿ ಸಭೆ ಸೇರಿದ್ದು ಅಲ್ಲಿಗೆ ಚಾಮರಾಜನಗರ ಲೋಕಸಭಾ ಸದಸ್ಯರಾದ ಶ್ರೀ ಧ್ರುವನಾರಾಯಣ ಮತ್ತು ವಿಧಾನಸಭೆ ಸದಸ್ಯರಾದ ಶ್ರೀ ಪುಟ್ಟರಂಗ ಶೆಟ್ಟಿ ಹಾಗೂ ಇತರೆ ಮುಖಂಡರು ಭೇಟಿ ನೀಡಿ ರೈತರ ಮೇಲೆ ಲಾಠಿ ಚಾರ್ಜ್ ಮಾಡಿದ್ದನ್ನು ಖಂಡಿಸಿ ರೈತರ ಬೇಡಿಕೆಗಳ ಬಗ್ಗೆ ಸಂಸತ್‌ನಲ್ಲಿ ಮಾತನಾಡುವುದಾಗಿ ಭರವಸೆ ನೀಡಿರುತ್ತಾರೆ. ನಂತರ ವಿಧಾನಸಭೆಯ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಹಾಗೂ ಗುಂಡ್ಲುಪೇಟೆ ವಿಧಾನಸಭೆ ಸದಸ್ಯರಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್

ರವರು ಸಭೆಗೆ ಹಾಜರಾಗಿ ಬೇಜವಾಬ್ದಾರಿತನದಿಂದ ವರ್ತಿಸಿದ ಜಿಲ್ಲಾಧಿಕಾರಿ ಹಾಗೂ ಲಾಠಿ ಚಾರ್ಜ್ ನಡೆದ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸುವಂತೆ ಸದನದಲ್ಲಿ ಮಾತನಾಡುವುದಾಗಿ ಭರವಸೆ ನೀಡಿರುತ್ತಾರೆ.

ನಂತರ ಮಧ್ಯಾಹ್ನ ಸುಮಾರು 1 ಗಂಟೆಗೆ ಶ್ರೀ ಮಹೇಶಪ್ರಭು ಹಾಗೂ ಸಿದ್ದರಾಜುರವರ ನೇತೃತ್ವದಲ್ಲಿ ಸುಮಾರು 150 ರೈತರು ಪ್ರವಾಸಿ ಮಂದಿರದಿಂದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಅನಿರ್ಧಿಷ್ಠ ಕಾಲದ ಧರಣಿ ಆರಂಭಿಸಿರುತ್ತಾರೆ. ಅವರ 26 ಬೇಡಿಕೆಗಳಲ್ಲಿ ಪ್ರಮುಖವಾದ 5 ಬೇಡಿಕೆಗಳಾದ 1) ದಿನದ 24 ಗಂಟೆಯೂ ಅನಿಯಮಿತ ಹಳ್ಳಿ/ನಗರ ತಾರತಮ್ಯವಿಲ್ಲದೆ ಮೂರು ಫೇಸ್ ವಿದ್ಯುತ್ ಪೂರೈಸಬೇಕು. 2) ಜಿಲ್ಲೆಯ ತಾಲ್ಲೂಕು ಕೇಂದ್ರಗಳಿಗೆ ಮೂಲಭೂತ ಸೌಲಭ್ಯ ಒದಗಿಸಬೇಕು. 3) ಕಬಿನಿ ಮೂರನೆ ಹಂತದ ಯೋಜನೆಯನ್ನು ಕೂಡಲೆ ಕೈಗೆತ್ತಿಕೊಳ್ಳಬೇಕು. 4) ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನೀಡಬೇಕು. 5) ರೈತರ ಮೇಲೆ ಹಾಕಿರುವ ಎಲ್ಲಾ ಮೊಕದ್ದಮೆಗಳು ರದ್ದಾಗಬೇಕೆಂಬ ಬೇಡಿಕೆಯನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರದ ವಿದ್ಯುತ್ ಇಲಾಖೆಯ ಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಹಾಲಪ್ಪ ಅಥವಾ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಬೇಡಿಕೆ ಪೂರೈಸುವ ಆಶ್ವಾಸನೆ ನೀಡಿದಲ್ಲಿ ರೈತರು ಧರಣಿಯನ್ನು ಕೈಬಿಡಬಹುದೆಂದು ತಿಳಿದುಬಂದಿರುತ್ತದೆ.

ಮಾನ್ಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ದಿನಾಂಕ: 23.12.2009ರಂದು ವಿಚಾರಣೆ ನಡೆಸಲು ಚಾಮರಾಜನಗರಕ್ಕೆ ಭೇಟಿ ನೀಡಲಿರುವುದಾಗಿ ತಿಳಿದುಬಂದಿದೆ, ಹಾಗೂ ದಿನಾಂಕ: 27.12.2009ರಂದು ಬೆಂಗಳೂರಿನಲ್ಲಿ ವಿಧಾನ ಸೌಧ ಮುತ್ತಿಗೆ ಕಾರ್ಯಕ್ರಮವನ್ನು ರೈತ ಸಂಘ ಹಮ್ಮಿಕೊಂಡಿರುವುದಾಗಿ ತಿಳಿದು ಬಂದಿದೆ. ರೈತರ ಮೇಲೆ ಮಾಡಲಾದ ಲಘು ಲಾಠಿ ಪ್ರಹಾರವು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಲೇ ತೆಗೆದುಕೊಂಡ ಕ್ರಮವಾಗಿದೆ, ಮತ್ತು ಈಗ ಚಾಮರಾಜನಗರ ಜಿಲ್ಲೆಯಲ್ಲಿ ಪರಿಸ್ಥಿತಿ ಶಾಂತವಾಗಿರುತ್ತದೆ.

(3-00 PM)

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ : ಮಾನ್ಯ ಮುಖ್ಯಮಂತ್ರಿಗಳು ನೀಡಿದ ಉತ್ತರವನ್ನು ಗಮನಿಸಿದಾಗ ಅಲ್ಲಿಯ ಸ್ಥಳಿಯ ಪೊಲೀಸ್ ಅಧಿಕಾರಿಗಳು ತಮ್ಮ ಮೂಗಿನ ನೇರಕ್ಕೆ ಏನು ವರದಿಯನ್ನು ಕೊಡಬೇಕೋ ಆ ರೀತಿ ಕೊಟ್ಟಂಥ ವರದಿ ಎದ್ದು ಕಾಣಿಸುತ್ತಿದೆ. ವಾಸ್ತವವಾಗಿ ಅಲ್ಲಿ ನಡೆದಿರುವ ವಿಚಾರ, ಆಗಾಗ ಚಾಮರಾಜನಗರ ಜಿಲ್ಲೆಯಲ್ಲಿರುವ ಈ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಆಗಿಂದಾಗ್ಗೆ ಬೇಡಿಕೆ ಗಳನ್ನಿಟ್ಟುಕೊಂಡು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಇದು ಇವತ್ತಿನದಲ್ಲ, ರೈತ ಸಂಘ ಪ್ರಾರಂಭವಾದ ಕಾಲದಿಂದಲೂ, ಹೊಸದಾಗಿ ನಮ್ಮ ಜಿಲ್ಲೆಯಾದ ಮೇಲೂ 10 ವರ್ಷಗಳಿಂದಲೂ ನಡೆಯುತ್ತಾ ಬಂದಿದೆ. ಆದರೆ ಯಾವ ಸಂದರ್ಭದಲ್ಲಿ ಕೂಡ ಈ ರೀತಿ ಉದ್ಧಟತನದಿಂದ ಅವರ ಮೇಲೆ ಲಾಠಿ ಚಾರ್ಜ್ ಮಾಡುವುದು, ಅವರನ್ನು ಬಹಳ ಲಘುವಾಗಿ ಕಾಣುವುದು, ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಲಿ, ಅವರು ಧರಣಿ ಕುಳಿತಂಥ ಸಂದರ್ಭದಲ್ಲಿ ಉಪಹಾರದ ವ್ಯವಸ್ಥೆ ಮಾಡುವುದಾಗಲಿ, ಇದ್ಯಾವುದನ್ನು ಮಾಡದೇ ಅವರನ್ನು ಕೆರಳಿಸುವ ರೀತಿಯಲ್ಲಿ ಜಿಲ್ಲಾ ಆಡಳಿತ ವಿಶೇಷವಾಗಿ ಜಿಲ್ಲಾಧಿಕಾರಿ, ಜಿಲ್ಲಾ ವರಿಷ್ಠಾಧಿಕಾರಿ ಎಸ್ಪಿ, ಇವರುಗಳ ಉದ್ಧಟತನದ ಒಂದು ವರ್ತನೆ, ಇವತ್ತು ಇಷ್ಟೆಲ್ಲಾ ಘಟನೆಗಳಿಗೆ ಮೂಲ ಕಾರಣವಾಗಿದೆ. ಅವರು 27 ಬೇಡಿಕೆಗಳನ್ನಿಟ್ಟುಕೊಂಡು ಶಾಂತಿಯುತವಾಗಿ ಮಹಾತ್ಮ ಗಾಂಧೀಜಿ ಯವರ ಫೋಟೋವನ್ನು ಹಾಕಿಕೊಂಡು ಅಹಿಂಸಾತ್ಮಕವಾಗಿ ಚಳುವಳಿಯನ್ನು ಮಾಡಬೇಕೆಂದು ಹಕ್ಕೊತ್ತಾಯವೆಂದು ಅವರು ಒಂದು ಹೋರಾಟವನ್ನು ಆರಂಭ ಮಾಡಿದ್ದಾರೆ. ಅವರು ಬೇಡಿಕೆಗಳನ್ನಿಟ್ಟುಕೊಂಡು ಹೋರಾಟವನ್ನು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಾಡುವಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಏನು ಹೇಳುತ್ತಾರೆಂದರೆ, ಜನಸ್ಪಂದನ ಕಾರ್ಯಕ್ರಮ ನಡೆಯುತ್ತದೆ, ಗ್ರಾಮ ಸಭೆಗಳು ನಡೆಯುತ್ತವೆ, ಅಲ್ಲೆಲ್ಲಾ ನೀವು ಬಗೆಹರಿಸಿ ಕೊಳ್ಳದೆ, ಇಲ್ಲಿ ನೀವು ಸ್ಟ್ರೈಕ್ ಮಾಡಿದರೆ ನಾವು ಉತ್ತರ ಕೊಡುವುದಕ್ಕಾಗುವು ದಿಲ್ಲವೆಂದು ಹೇಳಿ ಅವರನ್ನು ಒಂದು ರೀತಿ ಕೆರಳಿಸುವ ರೀತಿಯಲ್ಲಿ ಅವರೊಡನೆ ಮಾತನಾಡಿರುತ್ತಾರೆ. ಹಾಗಾಗಿ ಅವರು ಒಂದು ದಿವಸ ಮಾಡುವ ಮುಷ್ಕರವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡುತ್ತಾರೆ. ಮತ್ತೆ ಅವರು 8ನೇ ತಾರೀಖಿನಂದು ಅಲ್ಲಿ ಧರಣಿ ಮಾಡುವ ಸಂದರ್ಭದಲ್ಲಿ

ಅವತ್ತು ಜಿಲ್ಲಾಧಿಕಾರಿಗಳೆಲ್ಲಾ ಬಂದಿದ್ದರೆಂದು ಹೇಳುತ್ತಾರೆ ಆದರೆ ಫುಡ್ ಅಂಡ್ ಸಿವಿಲ್ ಸಪ್ಲೈ ಡಿಪಾರ್ಟ್‌ಮೆಂಟಿನಿಂದ ಉಪ ನಿರ್ದೇಶಕರಾದ ಮಹಿಳಾ ಅಧಿಕಾರಿ ಹೋಗಿ ಭೇಟಿ ಮಾಡಿರುವುದನ್ನು ಬಿಟ್ಟರೆ, ಇನ್ನುಳಿದ ಯಾವುದೇ ಒಬ್ಬ ಸ್ಥಳೀಯ ಅಧಿಕಾರಿಗಳು ಬಂದಿರುವುದಿಲ್ಲ. ಮೈಸೂರಿನಲ್ಲಿರುವ ರಿಜನಲ್ ಕಮಿಷನರ್ ಬರಬಹುದಾಗಿತ್ತು ಅಥವಾ ಇಲ್ಲಿ ಒಬ್ಬ ಪ್ರಧಾನ ಕಾರ್ಯದರ್ಶಿಯೊಬ್ಬರನ್ನು ಉಸ್ತುವಾರಿಯಾಗಿ ರಾಜ್ಯ ಸರ್ಕಾರ ಒಂದೊಂದು ಜಿಲ್ಲೆಗೆ ನೇಮಕ ಮಾಡಿರುತ್ತದೆ, ಅವರು ಬಂದು ರಾಜ್ಯಮಟ್ಟದ ಸರ್ಕಾರದ ಪರವಾಗಿ ಅವರನ್ನು ಭೇಟಿ ಮಾಡಿ ಅವರ ಅವಹಾಲು ಏನೆಂದು ಕೇಳಬಹುದಾಗಿತ್ತು ಅಥವಾ ಜಿಲ್ಲಾಧಿಕಾರಿಗಳೇ ಅವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಬಹುದಾಗಿತ್ತು. ಮತ್ತು ಜಿಲ್ಲೆಗೊಬ್ಬರು ಉಸ್ತುವಾರಿ ಸಚಿವರಿದ್ದಾರೆ ಆ ಸಚಿವರಾದರು ಕೂಡ ಈ ರೀತಿ ರೈತರು ಚಳುವಳಿ ಮಾಡುತ್ತಿದ್ದಾರೆ, ಅವರ ಬೇಡಿಕೆ ಏನಿದೆ ಎಂದು ಕೇಳತಕ್ಕಂಥ ಪ್ರಯತ್ನವನ್ನು ಮಾಡಬಹುದಾಗಿತ್ತು ಅಥವಾ ಕೃಷಿ ಸಚಿವರಾದರೂ ಬರಬಹುದಾಗಿತ್ತು. ಯಾರು ಬಾರದಿರುವ ಸಂದರ್ಭದಲ್ಲಿ ಅವರು ತಮ್ಮ ಧರಣಿಯನ್ನು ಮುಂದುವರೆಸುತ್ತಾ ಹೋಗುತ್ತಾರೆ. ಈ ರೀತಿಯಾಗಿ ಅವರಿಗೆ ಎರಡನೆ ದಿವಸವು ಕೂಡ ಸರ್ಕಾರದಿಂದ ಯಾವುದೇ ರೀತಿಯ ಸ್ಪಂದನೆ ಬರದೇ ಇದ್ದಾಗ, ಅವರು ಮತ್ತೆ 9ನೇ ತಾರೀಖು 7 ಎತ್ತಿನ ಗಾಡಿಗಳನ್ನು ತೆಗೆದುಕೊಂಡು ಅಲ್ಲಿಗೆ ಮೆರವಣಿಗೆಯ ರೂಪದಲ್ಲಿ ಬಂದು ಪ್ರತಿಭಟನೆಯನ್ನು ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಹೆಚ್ಚಿನ ರೀತಿಯಲ್ಲಿ extend ಮಾಡುತ್ತಾರೆ. ಅವಾಗಲೂ ಕೂಡ ಆ ಎತ್ತಿನಗಾಡಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯ ಒಳಗಡೆ ಪ್ರದಕ್ಷಿಣೆ ಮಾಡಿಕೊಂಡು ಹೊರಗಡೆಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರು ಕೂಡ, ಎತ್ತಿನ ಗಾಡಿಗಳು ಒಳಗಡೆಗೆ ಬರುವುದಕ್ಕೆ ಅವಕಾಶ ಕೊಡದೆ, ರೈತರನ್ನು ಇನ್ನು ಕೆರಳಿಸತಕ್ಕಂಥ ಕೆಲಸ ಜಿಲ್ಲಾಡಳಿತದಿಂದಾಗಿದೆ. ಆ ಜಿಲ್ಲಾಧಿಕಾರಿಗಳು ಯಾವ ಒಂದು ವಿಷಯಕ್ಕೂ ಸ್ಪಂದನೆ ಮಾಡುವಂತಿಲ್ಲ, ರೈತರನ್ನು ಕೆರಳಿಸುವುದು, ಸಾರ್ವಜನಿಕರನ್ನು ಕೆರಳಿಸತಕ್ಕಂಥ ಕೆಲಸವನ್ನೆ ಮಾಡಿಕೊಂಡು ಬಂದಿದ್ದಾರೆ. ಆದಾದ ಮೇಲೆ ಮತ್ತೆ 10ನೇ ತಾರೀಖು, ಎತ್ತಿನಗಾಡಿಗಳ ಪ್ರತಿಭಟನೆಗೆ ಜಿಲ್ಲಾಡಳಿತ ಸ್ಪಂದಿಸಲಿಲ್ಲ, ಒಂದು 50–60 ಜನ ಮಹಿಳೆಯರು ಪೊರಕೆ ಚಳುವಳಿ ಮಾಡುತ್ತೇವೆಂದು ಪೊರಕೆಯನ್ನು ಹಿಡಿದುಕೊಂಡು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆಲ್ಲಾ ಚಳುವಳಿ ಮಾಡಿ ಹೋಗಿದ್ದಾರೆ. ಅದಾಗಿ

4 ದಿವಸವಾಗಿ 5ನೇ ದಿವಸಕ್ಕೆ 30ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳನ್ನು ತಂದು ಅವುಗಳಲ್ಲಿ ಜನಗಳನ್ನೆಲ್ಲಾ ಕರೆದುಕೊಂಡು ಬಂದು ಪ್ರತಿಭಟನೆಯನ್ನು ಹೆಚ್ಚಿನ ರೀತಿಯಲ್ಲಿ ಮಾಡಲು ಬಂದಿದ್ದಾರೆ. ಟಿ.ಬಿ.ಯಿಂದ ಬಂದು ಸಂತೆಮರಳ್ಳಿ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರ ಬಂದಾಗ ಗೇಟ್ ಬಾಗಲು ಹಾಕಿ ಅವರನ್ನು ಅಲೊ ಮಾಡಿಲ್ಲ. ಒಳಗಡೆ ಒಂದು ಗುಂಪು ರೈತರು ಧರಣಿ ಮಾಡುತ್ತಿದ್ದಾರೆ, ಹೊರಗಡೆ ಗೇಟಿನ ಹತ್ತಿರ ಸಾವಿರಾರು ರೈತರು ಟ್ರ್ಯಾಕ್ಟರ್‌ಗಳಲ್ಲಿ ಬಂದು ಜಮಾಯಿಸುತ್ತಿದ್ದಾರೆ. ಯಾವಾಗ ಟ್ರ್ಯಾಕ್ಟರ್‌ಗಳಲ್ಲಿ ಬಂದಂಥವರನ್ನು ಬರುವುದಕ್ಕೆ ಗೇಟಿನಲ್ಲಿ ಅವಕಾಶ ಕೊಡಲಿಲ್ಲವೋ ಆಗ ಟ್ರ್ಯಾಕ್ಟರ್‌ಗಳನ್ನು ಆಫ್ ಮಾಡಿದ್ದಾರೆ. ಇವರು ಉತ್ತರದಲ್ಲಿ ಹೇಳಿರುವ ರೀತಿಯಲ್ಲಿ ಜೋಡಿ ರಸ್ತೆ ಇರುವುದರಿಂದ ವೃತ್ತಾಕಾರದಲ್ಲಿ ನಿಲ್ಲಿಸಲು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಳಾವಕಾಶವೇ ಇಲ್ಲ. ಅಲ್ಲಿ ಅವರನ್ನು 10–15 ನಿಮಿಷ ನಿಲ್ಲಿಸಿ ಊಟ ಮಾಡಿಕೊಂಡು ಬರುತ್ತೇವೆಂದು ಹೋಗುವಷ್ಟರೊಳಗೆ ಅವುಗಳನ್ನೆಲ್ಲಾ ತಳ್ಳಿ ಒಂದು ಕಡೆ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಯಾರೊ ಒಬ್ಬ ರೈತ ಬಂದು, ಏಕೆ ನಮ್ಮ ಟ್ರ್ಯಾಕ್ಟರ್ ಅನ್ನು ತಳ್ಳುತ್ತಿದ್ದೀರಿ ನಾವು ಮುಂದಕ್ಕೆ ನಿಲ್ಲಿಸಿಕೊಳ್ಳುತ್ತೇವೆ, ಇಲ್ಲವೆಂದರೆ ನಮ್ಮ ಟ್ರ್ಯಾಕ್ಟರ್‌ಗಳ ಮೇಲೆ ಸಾಲವಿದೆ ತೆಗೆದುಕೊಂಡು ಹೋಗಿ ಅದರ ಸಾಲವನ್ನು ನೀವೇ ತೀರಿಸಿಕೊಳ್ಳಿ ಎಂದು ರೈತ ಸಂಘದ ಧಾಟಿಯಲ್ಲಿ ಮಾತನಾಡಿದ್ದಾರೆ. ಅಷ್ಟು ಹೇಳಿದ್ದೆ ತಡ, ಜಿಲ್ಲಾಧಿಕಾರಿಗಳು ಹೇಳಿದರೊ, ಎಸ್ಪಿ ಹೇಳಿದರೊ ಯಾರು ಆದೇಶ ಕೊಟ್ಟರೆಂಬುದು ಗೊತ್ತಿಲ್ಲ, ಏಕಾಏಕಿ ಆ ಕೆಂಪನಹಳ್ಳಿ ಪ್ರಸಾದ್ ಎಂಬ ರೈತನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ, ಲಾಠಿ ಚಾರ್ಜ್ ಎಂದರೆ ಮಂಡಿಯಿಂದ ಕೆಳಗೆ ಹೊಡೆಯವುದು ಎಂದು ಒಂದು ನಿಯಮವಿದೆ. ಅದ್ಯಾವುದನ್ನೂ ಲೆಕ್ಕಿಸದೇ ತಲೆಗೆ, ಕೈಗೆ, ಬಾಯಿಗೆ, ಸಿಕ್ಕದಂತೆ, ಒಂದು ರೀತಿ ಸ್ವಾತಂತ್ರ್ಯ ಚಳುವಳಿಯ ಜಲಿಯನ್‌ವಾಲಾ ಬಾಗ್‌ನಲ್ಲಿ ಯಾವ ರೀತಿಯಾಗಿ ಒಂದು ಹೋರಾಟ ನಡೆಯಿತು ಆ ರೀತಿ ಈ ರೈತರನ್ನು ಸಿಕ್ಕ ಸಿಕ್ಕ ಕಡೆ ಓಡಾಡಿಸಿಕೊಂಡು ಲಾಠಿಯಲ್ಲಿ ಹಿಂದೆ ಮುಂದೆ ನೋಡದೆ ಆ ಹಸಿರು ಚೌಕವನ್ನು ಯಾರು ಹಾಕಿದ್ದಾರೆ, ನೀನು ಹಸಿರು ಚೌಕ ಹಾಕಿದ್ದಿ ಅದನ್ನು ತೆಗೆ ಎಂದು ಅವರನ್ನು ಥಳಿಸತಕ್ಕಂಥ ಕೆಲಸ ನಡೆದಿದೆ. ಇದನ್ನು ಎಲ್ಲಾ ದೃಶ್ಯ ಮಾಧ್ಯಮಗಳು ಕೂಡ ಸೆರೆ ಹಿಡಿದಿದ್ದಾವೆ, ಪೊಲೀಸ್ ಇಲಾಖೆಯವರು ಕೂಡ ಒಂದು ಸಿ.ಡಿ. ಮಾಡಿಸಿದ್ದಾರೆ. ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿಗೆ ಜಿಲ್ಲಾಡಳಿತವೇ ಪ್ರಚೋದನೆ ಕೊಟ್ಟು ಲಾಠಿಚಾರ್ಜ್ ಮಾಡುವ

ಒಂದು ಪ್ರಸಂಗ ಅವತ್ತು ಅಲ್ಲಿ ಉದ್ಭವವಾಗಿದೆ. ಕಾಕತಾಳಿಯವಾಗಿ ಅದೇ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆಯ ಕೂಡ ಇದೇ ರೀತಿ ಅದೇ 11ನೇ ತಾರೀಖು ರೈತರ ಮೇಲೆ ಲಾಠಿ ಚಾರ್ಜ್ ನಡೆದಿದೆ. ಅಲ್ಲಿಯ ಜಿಲ್ಲಾಧಿಕಾರಿಗಳ ಕಚೇರಿಗೆ ಬೇರೆ ಬೇರೆ ಕೆಲಸಕ್ಕೆ ಬಂದಂಥ ಜನರು ಈ ಒಂದು ಲಾಠಿ ಏಟಿಗೆ ಒಳಗಾಗಬೇಕಾದಂಥ ಪ್ರಸಂಗ ಅವತ್ತು ನಿರ್ಮಾಣವಾಗಿದೆ. ಚಳುವಳಿಗೆ ಟ್ರ್ಯಾಕ್ಟರ್‌ಗಳನ್ನು ತಂದು ಗೇಟಿನ ಹೊರಗಡೆ ಇದ್ದಂಥ ರೈತರ ಮೇಲೆ ಒಂದು ಕಡೆ ಲಾಠಿ ಚಾರ್ಜ್, ಒಳಗಡೆ ಶಾಂತಿಯುತವಾಗಿ ಶಾಮಿಯಾನ ಹಾಕಿಕೊಂಡು ಚಳುವಳಿ ಮಾಡುತ್ತಿದ್ದಂಥ ರೈತರ ಗುಂಪು ಏನಿತ್ತು ಅವರ ಮೇಲೂ ಯಾವುದೇ ಸೂಚನೆ ಇಲ್ಲದೆ, ಸುಮ್ಮನೆ ಚಳುವಳಿ ಮಾಡುತ್ತಾ ಕುಳಿತಿದ್ದವರಿಗೆ ಎದ್ದೇಳಿ ಎಂದು ಶಾಮಿಯಾನವೆಲ್ಲಾ ಕಿತ್ತು ಅಲ್ಲಿಂದ ಅವರನ್ನು ಆಚೆಗೆ ಕಳುಹಿಸುವಂಥ ಒಂದು ಪ್ರಯತ್ನ ಕೂಡ ಅಲ್ಲಿ ನಡೆದಿದೆ. ಶಾಮಿಯಾನ ಕಿತ್ತು ಅವರಿಗೆ ಆಚೆ ಕಳುಹಿಸುವ ಪ್ರಯತ್ನ ಕೂಡ ಅಲ್ಲಿ ನಡೆದಿದೆ. ಪೊಲೀಸ್‌ನವರಿಗೆ ರೈತರ ಮೇಲೆ ಆಕ್ರೋಶ ಇದ್ದರೆ ಅವರ ಮೇಲೆ ತೀರಿಸಿಕೊಳ್ಳಲಿ. ಗಾಂಧೀಜಿ ಫೋಟೋ ಕೂಡ ಕಿತ್ತು ಹಾಕಿ ಅದನ್ನು ಎಲ್ಲಿ ಹಾಕಿದರು ಏನು ಎಂದು ಗೊತ್ತಿಲ್ಲ. ಇವತ್ತಿನವರೆಗೆ ಆ ಫೋಟೋ ಸಿಕ್ಕಿಲ್ಲ. ರೈತ ಸಂಘದವರು ಇದನ್ನು ದೊಡ್ಡ ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಗಾಂಧೀಜಿ ಫೋಟೋಗೂ ಕೂಡ ಅವಮಾನ ಮಾಡತಕ್ಕಂತಹ ಒಂದು ಪ್ರಸಂಗ ಅವತ್ತು ಅಲ್ಲಿ ಚಾಮರಾಜನಗರದಲ್ಲಿ ನಡೆದಿದೆ. ಈ ಸಂದರ್ಭದಲ್ಲಿ 35 ರಿಂದ 40 ಜನರನ್ನು...

ಅಧ್ಯಕ್ಷರು : ಗಮನಸೆಳೆಯುವ ಸೂಚನೆ ಇದು. ಇದನ್ನು ಬೇರೆ ರೂಪದಲ್ಲಾದರೂ ತರಬಹುದಿತ್ತು.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ : ಇದು ಬಹಳ ಗಂಭೀರವಾದ ವಿಚಾರ, ಬೇರೆ ರೂಪದಲ್ಲಿ ಅವಕಾಶ ಆಗುವುದಿಲ್ಲವೆಂದು ಹೇಳಿ ತಾವು ಗಮನ ಸೆಳೆಯುವ ಸೂಚನೆ ರೂಪದಲ್ಲಿ ಅವಕಾಶ ಮಾಡಿಕೊಟಿದ್ದೀರಿ. ಇದು ಬಹಳ ಗಂಭೀರವಾದ ವಿಚಾರ ಇರುವುದರಿಂದ ಅಲ್ಲಿ ಏನು ಘಟನೆ ನಡೆದಿದೆ ಎನ್ನುವುದನ್ನು ಸದನದ ಮುಖಾಂತರ ತಿಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಂತಹ ಸರ್ಕಾರ ಇವತ್ತು ರೈತರ ಸಂಕಷ್ಟ ಏನಿದೆ, ಅವರ ಹೋರಾಟ ಏನಿದೆ, ಅಲ್ಲಿ ತಲೆಗೆ ಬೇರೆ ಬೇರೆ ದೇಹದ ಭಾಗಕ್ಕೆ ಬಹಳ ಏಟು

ಬಿದ್ದಂತಹ ರೈತರು ಏನಿದ್ದಾರೆ ಅವರು ಆಸ್ಪತ್ರೆಯಲ್ಲಿ ಇನ್‌ಪೇಶೆಂಟ್ ಆಗಿ ಅಡ್ಮಿಟ್ ಮಾಡಿಕೊಳ್ಳಬೇಕೆಂದು ಅಲ್ಲಿ ಡಾಕ್ಟರ್ ಸೂಚನೆ ಕೊಡುತ್ತಾರೆ. ಪೊಲೀಸರು ಆಸ್ಪತ್ರೆಗೆ ಅಡ್ಮಿಟ್ ಮಾಡದೇ ಜುಡಿಷಿಯಲ್ ಕಸ್ಟಡಿಗೆ ಕಳುಹಿಸತಕ್ಕಂತಹ ಕೆಲಸ ಮಾಡಿರುತ್ತಾರೆ. ಅದೇ ಸಂದರ್ಭದಲ್ಲಿ ಏಳು ಜನ ಪೊಲೀಸ್‌ರವರಿಗೆ ಯಾವ ಗಾಯಗಳು ಆಗಿಲ್ಲ ಯಾವ ಕಲ್ಲು ತೂರಾಟ ಆಗಿಲ್ಲ. ಅವರನ್ನು ರೈತರು ಕಲ್ಲು ತೂರಾಟ ಮಾಡಿದ್ದರಿಂದ ಇವರಿಗೆ ಏಟು ಆಗಿದೆ ಎಂದು ಅವರನ್ನು ಅಡ್ಮಿಟ್ ಮಾಡಿಸಿ ಏಳು ಜನ constable ಗಳನ್ನು ಅವರ ಮೇಲೆ ಕೇಸ್ ತೆಗೆದುಕೊಂಡು ರೈತರ ಮೇಲೆ ಕೇಸ್ ಬುಕ್ ಮಾಡುವ ಕೆಲಸ ಅಲ್ಲಿ ಮಾಡಿದ್ದಾರೆ. ವ್ಯವಸ್ಥಿತವಾದ ರೀತಿಯಲ್ಲಿ ಪೊಲೀಸ್ ಇಲಾಖೆ ತಮ್ಮನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ರೈತರ ಮೇಲೆ ಮಾಡಿದಂತಹ ಲಾಠಿ ಛಾರ್ಜ್‌ನಿಂದ ಆಗಬಹುದಾದಂತಹ ಆಕ್ರೋಶವನ್ನು ತಪ್ಪಿಸಲಿಕ್ಕೆ ಈ ರೀತಿ ಪೊಲೀಸರನ್ನೇ ಆಸ್ಪತ್ರೆಗಳಿಗೆ ದಾಖಲು ಮಾಡಿಸಿ ಅವರಿಂದ ದೂರು ಪಡೆಯುವಂತಹ ಪ್ರಯತ್ನ ಕೂಡ ಮಾಡಿದ್ದಾರೆ. ಅದರಲ್ಲಿಯೂ ಶಿವಕುಮಾರ್, ಮಹೇಶ್ ಕುಮಾರ್, ಮೂರ್ತಿ, ರಾಜಪ್ಪ ಎಂಬುವವರಿಗೆ ತುಂಬಾ ಗಂಭೀರವಾದ ಏಟುಗಳು ಬಿದ್ದಿವೆ. 240 ಅಮಾಯಕ ಜನರನ್ನು ಬಂಧಿಸಿದ್ದಾರೆ. 39 ಜನರ ಮೇಲೆ ಸುಳ್ಳು ಕೇಸು ದಾಖಲು ಮಾಡಿದ್ದಾರೆ. ರಾತ್ರಿ 11.00 ಗಂಟೆಯಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸುತ್ತಾರೆ. ಇಷ್ಟಲ್ಲದೆ ಮಧ್ಯಾಹ್ನ 3.00 ಗಂಟೆಯಲ್ಲಿ 60 ಜನ 11ನೇ ತಾರೀಖು ಈ ಲಾಠಿ ಛಾರ್ಜ್ ಎಲ್ಲಾ ಮುಗಿದ ಮೇಲೆ 60 ಜನ ಮಹಿಳಾ ರೈತ ಕಾರ್ಯಕರ್ತೆಯರನ್ನು ಎರಡು ಡಿಎಆರ್ ವ್ಯಾನ್‌ಗಳಲ್ಲಿ ಅವರನ್ನು ಕೂರಿಸಿಕೊಂಡು ಬೆಳಗಿನ ಜಾವ ಎರಡು ಗಂಟೆಯವರೆಗೆ ಅವರಿಗೆ ಊಟ ಇಲ್ಲ, ತಿಂಡಿ ಇಲ್ಲ, ನೀರಿಲ್ಲ, ಅವರು ಶೌಚಾಲಯಕ್ಕೆ ಹೋಗುವುದಕ್ಕೂ ಅವಕಾಶ ಇಲ್ಲ. ಅವರನ್ನು ಬಂಧನಕ್ಕೂ ಒಳಪಡಿಸಲಿಲ್ಲ. ಈ ಕಡೆ ಅವರನ್ನು ಯಾವುದಾದರೂ ಒಂದು ಮೈದಾನದಲ್ಲಿ ಅವರನ್ನು ಅರೆಸ್ಟ್ ಮಾಡುವ ರೀತಿಯಲ್ಲಿಯೂ ಇಡಲಿಲ್ಲ. ಡಿಎಆರ್ ವ್ಯಾನ್‌ನಲ್ಲಿ ಅವರನ್ನು ಮಧ್ಯಾಹ್ನ 3.00 ಗಂಟೆಯಿಂದ ಬೆಳಗಿನಜಾವ ಎರಡು ಗಂಟೆಯವರೆಗೆ ಎರಡು ವ್ಯಾನ್‌ನಲ್ಲಿ ಮಹಿಳೆಯರನ್ನು ಕೂರಿಸಿಕೊಂಡಿರುವುದು ಮಾನವೀಯತೆಯ ಲಕ್ಷಣನಾ ಎಂದು ತಾವು ಇಲ್ಲಿ ವಿಚಾರ ಮಾಡಬೇಕಾಗಿದೆ.

ಉಪಾಧ್ಯಕ್ಷರು : ಇಂತಹ ಗಂಭೀರವಾದ ವಿಚಾರವನ್ನು ಬೇರೆ ರೂಪದಲ್ಲಿ ತರಬಹುದಿತ್ತು.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ : ರೈತರಿಗೆ ಸಂಬಂಧಪಟ್ಟ ವಿಚಾರ ತಾವು ಸ್ವಲ್ಪ ಕರುಣೆ ತೋರಿಸಬೇಕು. ತಾವು ರೈತರ ವಿಚಾರದಲ್ಲಿ ಇಷ್ಟು ಬಿಗಿ ಆದರೆ ಕಷ್ಟ. ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರೆ. ಅವರು 11.30 ಗಂಟೆ ರಾತ್ರಿಗೆ ಚಾಮರಾಜನಗರಕ್ಕೆ ಬರುತ್ತಾರೆ. ಬಂದವರು ಸೀದ ಆಸ್ಪತ್ರೆಗೆ ಹೋಗುತ್ತಾರೆ. ಅವರು ಬಂದು ರೈತರ ಪರಿಸ್ಥಿತಿ ಏನು, ಲಾಠಿ ಛಾರ್ಜ್‌ನಲ್ಲಿ ಏಟಾದಂತಹ ರೈತರು ಯಾವ ಸ್ಥಿತಿಯಲ್ಲಿದ್ದಾರೆ ಏತಕ್ಕಾಗಿ ಇವರು ಚಳುವಳಿ ಮಾಡುತ್ತಿದ್ದರು, ಏನು ಎತ್ತ ಎಂದು ಅವರ ಬೇಡಿಕೆಗಳೇನು ಎಂದು ಕೇಳದೇ ಸೀದ ಏಳು ಜನ ಪೊಲೀಸ್ constable ಗಳೇನು ನಾಟಕೀಯವಾಗಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದರು ಅವರ ಯೋಗ ಕ್ಷೇಮವನ್ನು ಮೊದಲು ವಿಚಾರಿಸುತ್ತಾರೆ. ಅಲ್ಲಿಂದ ಬಂದು ಬಂಧನಕ್ಕೊಳಗಾಗಿರುವ ರೈತ ಮುಖಂಡರನ್ನು ಅವರು ಭೇಟಿ ಆಗುವುದಿಲ್ಲ. ಎರಡು ಡಿಎಆರ್ ವ್ಯಾನ್‌ನಲ್ಲಿ ಮಹಿಳಾ ರೈತರನ್ನು ಅರೆಸ್ಟ್ ಮಾಡಿ ವ್ಯಾನ್‌ನಲ್ಲಿಟ್ಟಿದ್ದರಲ್ಲ ಅಲ್ಲಿ ಹೋಗಿ ಅವರನ್ನು ಮಾತನಾಡಿಸಿ ಶಾಸ್ತ್ರ ಮುಗಿಸಿ ರಾತ್ರೋ ರಾತ್ರಿ ಚಾಮರಾಜನಗರದಿಂದ ವಾಪಸ್ ಬರುತ್ತಾರೆ. ಇದು ಸರ್ಕಾರ ರೈತರೊಂದಿಗೆ ಸ್ಪಂದಿಸುವಂತಹ ಒಂದು ವಿಧಾನ. ಅವತ್ತು ರಾತ್ರಿ ಅಲ್ಲಿ ಉಳಿದು ಅಥವಾ ಬೆಳಿಗ್ಗೆ ನಮ್ಮನ್ನೆಲ್ಲಾ ಕರೆದು ಮಾತನಾಡಿ ಈ ಜಿಲ್ಲೆಯಲ್ಲಿ ಏನು ಸಮಸ್ಯೆ ಇದೆ ಎಂದು ಕೇಳಬಹುದಿತ್ತು. ಮಾನ್ಯ ಮುಖ್ಯ ಮಂತ್ರಿಳೇನಾದರೂ ಅಂತಹ ಮಹತ್ ಕಾರ್ಯವೇನಾದರೂ ಉಸ್ತುವಾರಿ ಸಚಿವರಿಗೆ ವಹಿಸಿದ್ದರಾ? ಅಥವಾ ಮಾನ್ಯ ಸಚಿವರಿಗೆ ಅವರ ಇಲಾಖೆಯಲ್ಲಿ ತಲೆ ಹೋಗುವಂತಹ ಬಹಳ ದೊಡ್ಡ ಜವಾಬ್ದಾರಿ ಕೆಲಸ ಇತ್ತಾ? ಒಂದು ದಿನ ಉಳಿದು ಅಲ್ಲಿ ಏನಾಯಿತು ಏನು ಎತ್ತ ಎಂದು ಕೇಳುವಷ್ಟು ವ್ಯವಧಾನ ಒಬ್ಬ ಸಚಿವರಿಗೆ ಇಲ್ಲವೆಂದರೆ ಯಾವ ರೀತಿ ನಾವು ರೈತರ ವಿಚಾರದಲ್ಲಿ ಈ ಸರ್ಕಾರ ಸ್ಪಂದಿಸುತ್ತಿದೆ ಎಂದು ಭಾವನೆ ಮಾಡುವುದಕ್ಕಾಗುತ್ತದೆ? ಇದೆಲ್ಲಾ ಆದ ಮೇಲೆ 12ನೇ ತಾರೀಖು ಇಡೀ ಚಾಮರಾಜನಗರದಲ್ಲಿ ಸ್ವಯಂ ಪ್ರೇರಿತವಾಗಿ ಬಂದ್ ಆಚರಣೆ ಮಾಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ದೃಶ್ಯ ಮಾಧ್ಯಮದಲ್ಲಿ ಪೊಲೀಸ್ ಕೇಸ್‌ಗಳೆಲ್ಲಾ ವಾಪಸ್ ಪಡೆಯುತ್ತೇವೆ, ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಅವರು ಹೇಳಿದಂಥದ್ದು ಟಿವಿ ಛಾನಲ್‌ಗಳಲ್ಲಿ ಬಂದಿತ್ತು. ಕೇಸ್ ವಾಪಸ್ ಪಡೆದುಕೊಂಡ ಪ್ರಕರಣವೂ ಆಗಲಿಲ್ಲ, ರೈತರು ಅವರು ಸ್ವಯಂ ಜಾಮೀನು ಕೊಟ್ಟು 14ನೇ ತಾರೀಖು ನಾಲಕ್ಕು ದಿನ ಜೈಲಿನಲ್ಲಿದ್ದು ಬಿಡುಗಡೆ

ಮಾಡಿಸಿಕೊಂಡು ಬರುವವರೆಗೆ ಸರ್ಕಾರದಿಂದ ಯಾವ ಪ್ರಯತ್ನ ಕೂಡ ಆಗಲಿಲ್ಲ. ಈ ರೀತಿ ಅವತ್ತು ನಡೆದಿದೆ. ಇದಾದ ಮೇಲೆ ಅವರು ಹೊರಗಡೆ ಬಂದು ಮತ್ತೆ ಪುನಃ ಅವರ ಚಳುವಳಿಯನ್ನು ಮುಂದುವರೆಸುವುದಕ್ಕೆ ಪ್ರಾರಂಭ ಮಾಡಿದ ಮೇಲೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಜಿಲ್ಲೆಗೆ ಇತರ ಪುಟ್ಟರಂಗಶೆಟ್ಟರು, ನರೇಂದ್ರರವರು, ನಾನು ಮತ್ತು ನಮ್ಮ ಲೋಕಸಭಾ ಸದಸ್ಯರಾದ ಧ್ರುವನಾರಾಯಣರವರು ಎಲ್ಲರೂ ಕೂಡ ಸ್ಥಳಕ್ಕೆ ಭೇಟಿ ಕೊಟ್ಟು ಅವರ ಅಹವಾಲುಗಳು ಏನೆಂದು ವಿಚಾರಿಸಿ ಇದನ್ನು ನಾವು ಸರ್ಕಾರದ ಗಮನಕ್ಕೆ ತರುತ್ತೇವೆಂದು ಭರವಸೆ ಕೊಟ್ಟು ಚಳುವಳಿಯನ್ನು ವಾಪಸ್ ಪಡೆಯಬೇಕೆಂಬ ಒಂದು ಮನವೊಲಿಕೆಯ ಪ್ರಯತ್ನವನ್ನು ನಾವೂ ಕೂಡ ಮಾಡಿದ್ದೇವೆ. ಆದರೂ ಉದ್ಧಟತನದಿಂದ ವರ್ತನೆ ಮಾಡಿದ ಜಿಲ್ಲಾಧಿಕಾರಿಯವರ ಕ್ರಮ ಒಂದು ದಿನ ಜಿಲ್ಲಾಧಿಕಾರಿ ಒಂದು ಕೈಯಲ್ಲಿ ವೈರ್ಲೆಸ್ ಸೆಟ್ಟು ಹಾಗೂ ಒಂದು ಕೈಯಲ್ಲಿ ಲಾಠಿ ಹಿಡಿದುಕೊಂಡು ಹೋಗಿರುವ ಫೋಟೋ ಇದೆ. ಸರ್ಕಲ್‌ನಲ್ಲಿ ನಿಂತುಕೊಂಡು ಅಲ್ಲಿ ಪೊಲೀಸ್ ಅಧಿಕಾರಿ ತರಹ ಡಿಕ್ಟೇಟ್ ಮಾಡುವಂತಹ ಒಂದು ವರ್ತನೆ ಅದು ಜಿಲ್ಲಾಧಿಕಾರಿಯವರು ಮಾಡುವಂತಹ ವರ್ತನೆಯಾ? ಲಾಠಿ ಕೈಯಲ್ಲಿ ಹಿಡಿದುಕೊಂಡರು ಎಂದರೆ ಅಲ್ಲಿಗೆ ಪೊಲೀಸ್ ಇಲಾಖೆ ಈ ರಾಜ್ಯದಲ್ಲಿ ಅಥವಾ ಜಿಲ್ಲೆಯಲ್ಲಿ ನಿಷ್ಕ್ರಿಯ ಆಗಿ ಹೋಗಿದೆಯೇ? ನಿರ್ದೇಶನ ಕೊಡುವುದಕ್ಕೆ SPನೇ ಬರಬೇಕಾಗಿತ್ತು ಎಂದರೆ ಅಲ್ಲಿಗೆ ಪೊಲೀಸ್ ಇಲಾಖೆ ಸಾಮರ್ಥ್ಯದಿಂದ ಕೆಲಸ ಮಾಡುತ್ತಿಲ್ಲವೆಂದು ನಾವು ಭಾವನೆ ಮಾಡಬೇಕಾಗುತ್ತದೆ. ಇದಾದ ಮೇಲೆ ಅವರ ಚಳುವಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಕೈಯಲ್ಲಿ ಮತ್ತೆ ಅವರು ಪ್ರಯತ್ನ ಮಾಡುವುದಕ್ಕೆ ಹೋಗಲೇ ಇಲ್ಲ. ಬೇರೆ ವಿಚಾರಗಳೆಲ್ಲದರಲ್ಲಿಯೂ ಜಿಲ್ಲಾ ಉಸ್ತುವಾರಿ ಸಚಿವರು ಬರುತ್ತಾರೆ. ವರ್ಗಾವಣೆ ವಿಚಾರ ಇರಬಹುದು, ಬೇರೆ ಇನ್ಯಾವುದೇ ವಿಚಾರಗಳು, ಶಾಸಕರು ಎಲ್ಲಾದರೂ ಒಂದು ಕಾರ್ಯಕ್ರಮಕ್ಕೆ invitation print ಮಾಡಿಸಿದರೆ ನನ್ನ ಅನುಮತಿ ಇಲ್ಲದೆ ಹೇಗೆ ಮಾಡಿಸಿದಿರಿ ಎಂದು ಅದನ್ನೆಲ್ಲಾ ತಡೆಹಿಡಿಸುವಷ್ಟು ಪ್ರಭಾವ ಬೀರುವವರು ಧರಣಿ ಕುಳಿತವರ ಬಗ್ಗೆ ಏನಾಯಿತು ಎಂದು ಒಂದು ದಿನ ಕೇಳುವುದಕ್ಕೆ ಆಗಲಿಲ್ಲ. ಮಹದೇಶ್ವರ ಬೆಟ್ಟಕ್ಕೆ ಭೇಟಿ ಕೊಟ್ಟು ಮಾನ್ಯ ಯೋಜನಾ ಸಚಿವರಾದ ರಾಮಚಂದ್ರೇಗೌಡರು ಬಂದು ಅವರೂ ಕೂಡ 5–10 ನಿಮಿಷದಲ್ಲಿ ಬಂದು ಶಾಸ್ತ್ರ ಮುಗಿಸಿ

ಹೋಗುತ್ತಾರೆ. ನಿಮಗೆಲ್ಲಾ ಬಸ್ ಮಾಡಿ ಕೊಡುತ್ತೇವೆ. ನೀವೆಲ್ಲಾ ಬೆಂಗಳೂರಿಗೆ ಬನ್ನಿ ನಾವೇ ಬಸ್ ಮಾಡಿ ನಿಮಗೆ ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ, ವಿಧಾನಸೌಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡೋಣ ಎಂದು ಹೇಳುತ್ತಾರೆ. ರೈತರು ಡಿಸಿ ಎಸ್‌ಪಿಗಳನ್ನು ವರ್ಗಾವಣೆ ಮಾಡಬೇಕೆಂದರೆ ಅದೆಲ್ಲಾ ಬೈ ಪ್ರಾಡಕ್ಟ್‌ಗಳು ಇದರ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳುವ ಹಾಗಿಲ್ಲ ಎಂದು ಹೇಳಿರುವಂತಹ ಅವರ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿವೆ. ಈ ರೀತಿ ಹೇಳಿ ಅವರು ವಾಪಸ್ ಬರುತ್ತಾರೆ. ಇದಾದ ಮೇಲೆ ಇನ್ನೂ ಬೇರೆ ದಾರಿ ಇಲ್ಲವೆಂದು ಹೇಳಿ ರಾಜ್ಯದ ನಾಯಕರಾದ ಪುಟ್ಟಣ್ಣಯ್ಯನವರು ಇರಬಹುದು, ಕೋಡಿ ಹಳ್ಳಿ ಚಂದ್ರಶೇಖರ್ ಇರಬಹುದು, ಇತರ ಎಲ್ಲಾ ರೈತ ಮುಖಂಡರುಗಳು ಸೇರಿ 19ನೇ ತಾರೀಖು ಬೆಂಗಳೂರಿಗೆ ಪಾದಯಾತ್ರೆ ಹೋಗಬೇಕೆಂದು ಹೇಳಿ ಪಾದಯಾತ್ರೆ ಕೈಗೊಂಡಿದ್ದಾರೆ. ಈಗಾಗಲೇ ನಾಲ್ಕನೇ ದಿನ ಅವರು ಪಾದಯಾತ್ರೆ ಮುಂದುವರೆಸಿ ಇವತ್ತು ಬಿಡದಿ ದಾಟಿ ಬೆಂಗಳೂರಿಗೆ ಬರುತ್ತಿದ್ದಾರೆ. ಇತ್ತೀಚೆಗೆ ನಮಗೆ ಬಂದ ಮಾಹಿತಿ ಪ್ರಕಾರ 40–50 ಜನ ಮಹಿಳಾ ರೈತರಿಗೆ ಅವರ ಕಾಲುಗಳಿಗೆ ಹುಣ್ಣಾಗಿ ಬ್ಯಾಂಡೇಜ್‌ಗಳನ್ನು ಕಟ್ಟಿಕೊಂಡು ನಡೆಯುವುದಕ್ಕಾಗದೆ ಅವರು ಕುಂಟಿಕೊಂಡು ಬೆಂಗಳೂರಿಗೆ ತಲುಪತಕ್ಕಂತಹ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಚಳುವಳಿ ನಡೆದುಕೊಂಡು ಬರುತ್ತಿದೆ. ನಮ್ಮ ಜಿಲ್ಲೆಯಲ್ಲಿ ಹಿಂದಿನ ಜಿಲ್ಲಾಧಿಕಾರಿಗಳಿದ್ದರು, ಚಳುವಳಿ ಮಾಡುವಾಗ ಅವರಿಗೆ ಒಂದು ನಿರ್ದಿಷ್ಟ ಜಾಗದಲ್ಲಿ ಟೆಂಟ್ ಹಾಕಿಕೊಳ್ಳುವುದಕ್ಕೆ ಅವಕಾಶ ಕೊಡುವರು. ಒಂದೆರಡು ಕ್ಯಾನ್‌ಗಳಲ್ಲಿ ನೀರು ತರಿಸಿ ಇಡುವರು. ಚಳುವಳಿ ಮಾಡುವಾಗ ಒಂದು ನಿರ್ದಿಷ್ಟವಾದ ಜಾಗದಲ್ಲಿ tent ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದರು. ಒಂದು ಎರಡು ಕ್ಯಾನ್‌ಗಳಲ್ಲಿ ನೀರು ತುಂಬಿಸಿ ಇಡುತ್ತಿದ್ದರು. ಆಗ ಅವರ ಅಹವಾಲು ಏನಿದೆ ಅದನ್ನು ಕೂಡಲೆ ಮಂತ್ರಿಗಳಿಗೆ ಹೇಳುತ್ತಿದ್ದರು. ಯಾರಾದರೂ ಬಂದು ಅವರ ಹತ್ತಿರ ಅರ್ಜಿ ತೆಗೆದುಕೊಂಡು ಇದಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಚರ್ಚೆ ಮಾಡುತ್ತೇವೆಂದು convince ಮಾಡಿ ಅವರ ಚಳುವಳಿಯನ್ನು ಮುಕ್ತಾಯಗೊಳಿಸುವ ಪ್ರಯತ್ನ ಮಾಡುತ್ತಿದ್ದರು. 15 ದಿನಗಳ ಕಾಲ ಪಾದಯಾತ್ರೆ ಮಾಡಿಕೊಂಡು ಚಳುವಳಿ ಮಾಡುತ್ತಿದ್ದರೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಚಾಮರಾಜನಗರದಿಂದ ಮೈಸೂರು ಜಿಲ್ಲೆಗೆ ಬಂದು ನಂತರ ಮಂಡ್ಯ ಜಿಲ್ಲೆ ದಾಟಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಂದಿದ್ದಾರೆ. ಎಲ್ಲಿಯೂ ಕೂಡ ಯಾವುದೇ ಜಿಲ್ಲಾಧಿಕಾರಿಯಾಗಲಿ, ಯಾವುದೇ ಜಿಲ್ಲಾ ಸಚಿವರಾಗಲಿ, ನಮ್ಮ ರಾಜ್ಯದ ಕೃಷಿ ಸಚಿವರು, ಕಂದಾಯ ಸಚಿವರು ಯಾರಾದರೂ ಹೋಗಿ ನಿಮ್ಮ ಅಹವಾಲು ಏನಿದೆ, ಬೆಂಗಳೂರಿನವರೆಗೆ ನೀವು ಏಕೆ ಬರುತ್ತಿದ್ದೀರಿ, ನಿಮ್ಮ ಚಳುವಳಿಯನ್ನು ಮೊಟಕುಗೊಳಿಸಿ ಎಂದು ಹೇಳುವಂತಹ ಪ್ರಯತ್ನ ಯಾರೂ ಕೂಡ ಮಾಡಿಲ್ಲ. ಅವರ ಬೇಡಿಕೆಗಳು ತಲೆ ಹೋಗುವಂತಹ ಬೇಡಿಕೆಗಳೇನೂ ಇಲ್ಲ. 26 ಬೇಡಿಕೆಗಳು ಹಕ್ಕು ಒತ್ತಾಯ ಎಂದು ಹೇಳುತ್ತಾರೆ. ಅದರಲ್ಲಿ 4–5 ಬಹಳ ಸುಲಭವಾಗಿ ಬಗೆಹರಿಸಬಹುದಾದಂತಹ ಸಮಸ್ಯೆಗಳಿವೆ. ಅವುಗಳನ್ನು ಅವರಿಗೆ ಮನವರಿಕೆ ಮಾಡಿಕೊಡುವಂತಹ ಕೆಲಸ ಮಾಡಿದ್ದರೆ ಮುಗಿದು ಹೋಗುತ್ತಿತ್ತು. ಅವರ ಮೇಲೆ ಲಾಠೀ ಚಾರ್ಜ್ ಆದಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಯವರ ವರ್ತನೆ ಏನಿದೆ ಅದರ ಬಗ್ಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನೂ ಮಾಡಿದ್ದಾರೆ. ನಾವೂ ಕೂಡ ಅವರು ಬಹಳ ಉದ್ಭಟತನದಿಂದ ವರ್ತನೆ ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಇವತ್ತಿನ ವರೆಗೆ ಸರ್ಕಾರ ಅವರ ಮೇಲೆ ಯಾವುದೇ ಕ್ರಮ ಜರುಗಿಸುವಂತಹ ಕೆಲಸ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿದ್ದರೂ ಕೂಡ ಇವತ್ತಿನವರೆಗೆ ನ್ಯಾಯಾಂಗ ತನಿಖೆಗೆ ಆದೇಶವಾಗಿಲ್ಲ. ರೈತರ ಮೇಲೆ ಹಾಕಿರುವಂತಹ ಎಲ್ಲಾ ಮೊಕದ್ದಮೆಗಳನ್ನೂ ವಾಪಸ್ಸು ಪಡೆಯುತ್ತೇವೆ ಎಂದು ಹೇಳಿದ್ದರು. ಆದರೆ ಇವತ್ತಿನವರೆಗೂ ಕೂಡ ಆ ಕೇಸ್‌ಗಳನ್ನು ವಾಪಸ್ಸು ಪಡೆದಿಲ್ಲ. ಈ ಎಲ್ಲಾ ಕಾರಣದಿಂದ ಈ ಸರ್ಕಾರ ರೈತವಿರೋಧಿ ಧೋರಣೆಯನ್ನು ಹೊಂದಿದೆ ಮತ್ತು ರೈತರ ವಿಚಾರವೆಂದರೆ ಸಾಕು ಏಕೋ ಒಂದು ರೀತಿ ತಲೆಯ ಭಾರ ಬಿದ್ದಂತಹ ರೀತಿಯಲ್ಲಿ ಸರ್ಕಾರ ವರ್ತನೆ ಮಾಡುವಂತಹ ಕೆಲಸ ಆಗುತ್ತಿದೆ. ಇವತ್ತೇನು ಈ ಘಟನೆ ಆಗಿದೆ ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ಇದಕ್ಕೆ ಸರ್ಕಾರ ಈ ಕ್ಷಣದಲ್ಲಾದರೂ ಸ್ಪಂದಿಸಿ ಅವರಿಗೆ ಸರಿಯಾದ ರೀತಿಯ ಭರವಸೆ ಕೊಡಬೇಕು ಮತ್ತು ತಾವು ಹಿಂದೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದನ್ನು ಈಡೇರಿಸತಕ್ಕಂತಹ ಕೆಲಸವಾಗಬೇಕು. ಇಲ್ಲವಾದರೆ ನಾವೂ ಕೂಡ ರಾಜಕೀಯವಾಗಿ ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕಾದಂತಹ ಅನಿವಾರ್ಯ

ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಹೇಳಿ ಕೇಳಿ ಚಾಮರಾಜನಗರ ಜಿಲ್ಲೆ, ಬರಗಾಲ ಪೀಡಿತ ಜಿಲ್ಲೆ. ಅಂತಹ ಜಿಲ್ಲೆಯಲ್ಲಿ ರೈತರ ಸಮಸ್ಯೆಗಳು ನಿರಂತರವಾಗಿರುತ್ತವೆ. ಅದನ್ನು ಕೇಳತಕ್ಕಂತಹ ವ್ಯವಸ್ಥೆ ನಿರ್ಮಾಣ ಆಗದೇ ಇದ್ದರೆ, ಆ ಜಿಲ್ಲೆ ಬೆಳವಣಿಗೆ ಆಗುವುದಾಗಲಿ ಅಥವಾ ಯಾವುದೇ ರೈತರ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರನ್ನು ಮತ್ತೆ ಒತ್ತಾಯಿಸುತ್ತೇನೆ. ತಾವು ಕೊಟ್ಟಿರತಕ್ಕಂತಹ ಹೇಳಿಕೆಗೂ ಮತ್ತು ವಾಸ್ತವಾಂಶಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ನಾನು ಈ ಸದನದಲ್ಲಿ ಈಗ ಏನು ಮಾತನಾಡಿದ್ದೇನೆ ಇವೆಲ್ಲ ವಾಸ್ತವಕ್ಕೆ ಬಹಳ ಹತ್ತಿರವಾದಂತಹ ವಿಚಾರಗಳಾಗಿವೆ. ಆ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದೇ ರೀತಿ ದಾವಣಗೆರೆಯಲ್ಲೂ ಕೂಡ ಸುಮಾರು 100 ದಿನಗಳಿಂದ 180 ಎಕರೆ ಬಗ್ಗೆ ಚಳುವಳಿ ನಡೆಸುತ್ತಿದ್ದಾರೆ. ಇವತ್ತು ಸರಿಯಾಗಿ 100ನೇ ದಿನ. ಈ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಮಾತನಾಡುವವರಿದ್ದಾರೆ.

6. (ಆ) ವಿಷಯ : ಚಾಮರಾಜನಗರ ಮತ್ತು ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ :

ಶ್ರೀ ಶ್ಯಾಮನೂರು ಶಿವಶಂಕರಪ್ಪ (ದಾವಣಗೆರೆ) : ಚಾಮರಾಜನಗರ ಹಾಗೂ ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ವಿನಾಕಾರಣ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಶಿವಶಂಕರಪ್ಪ ಮತ್ತು ಇತರರು ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.